**ಅಸಲು ದಾವ ಸಂಖ್ಯೆ: 1186/2025**

**ಪಿ.ಡಬ್ಲೂ -1**

**ದಿಃ 03-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು 5ನೇ ಪ್ರತಿವಾದಿ ಪರ ವಕೀಲರಾದ ಶ್ರೀ ACK ರವರಿಂದಃ-**

1. ನನ್ನ ಮಗಳು ಐಮನ ಳನ್ನು ಶಾಲೆಗೆ ದಾಖಲು ಮಾಡುವ ಸಮಯದಲ್ಲಿ ನಾನು ಆಕೆಯ ಜನನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೆ. ಈಗ ಸಾಕ್ಷಿಗೆ ಒಂದು ಜನನ ಪ್ರಮಾಣ ಪತ್ರ ತೋರಿಸುತ್ತಿದ್ದು, ವಾದಿಯನ್ನು ಶಾಲೆಗೆ ಸೇರಿಸುವ ಸಮಯದಲ್ಲಿ ಸದರಿ ಜನನ ಪ್ರಮಾಣ ಪತ್ರವನ್ನು ಸಾಕ್ಷಿ ಶಾಲೆಗೆ ನೀಡಿದ್ದಾಗಿ ಒಪ್ಪಿಕೊಂಡ ಕಾರಣ ಸದರಿ ಜನನ ಪ್ರಮಾಣ ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ಅರ್ಜಿಯನ್ನು ತೋರಿಸುತ್ತಿದ್ದು, ಸದರಿ ಅರ್ಜಿಯನ್ನು ವಾದಿಗೆ 5ನೇ ಪ್ರತಿವಾದಿ ಶಾಲೆಗೆ ಸೇರಿಸುವ ಸಮಯದಲ್ಲಿ ನೀಡಿದ್ದು ಎಂದು ಸಾಕ್ಷಿ ಒಪ್ಪಿದ ಕಾರಣ ಸದರಿ ಅರ್ಜಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಒಂದು ಪ್ರಮಾಣ ಪತ್ರ ತೋರಿಸುತ್ತಿದ್ದು, ಸದರಿ ಪ್ರಮಾಣ ಪತ್ರವನ್ನು ಹೆಸರು ತಿದ್ದುಪಡಿ ಮಾಡುವ ಸಲುವಾಗಿ ಶಾಲೆಗೆ ನೀಡಿದ ಪ್ರಮಾಣ ಪತ್ರ ಎಂದು ಸಾಕ್ಷಿ ಒಪ್ಪಿದ ಕಾರಣ ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-3 ರ ಪ್ರಕಾರ ಶಾಲಾ ದಾಖಲಾತಿಗಳಲ್ಲಿ ಹೆಸರು ತಿದ್ದುಪಡಿ ಆಗಿರುವುದಿಲ್ಲ. ನಾನು ವೈಯಕ್ತಿಕವಾಗಿ ಶಾಲೆಗೆ ಹೋಗಿ ಹೆಸರು ತಿದ್ದುಪಡಿ ಆದ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ನಾವು ಕೊಟ್ಟ ಮಾಹಿತಿಯ ಮೇರೆಗೆ ಶಾಲೆಯವರು ವಾದಿಯ ಮಾಹಿತಿ ನಮೂದು ಮಾಡಿಕೊಂಡಿರುತ್ತಾರೆ ಹಾಗೂ ಇದರಲ್ಲಿ ಶಾಲೆಯವರದ್ದು ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**